ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಚುನಾವಣೆ/ಜುಲೈ –ಸೆಪ್ಟಂಬರ್/01/2016

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ" ಬ್ಲಾಕ್,
ಶಾಂತಿನಗರ, ಬೆಂಗಳೂರು–560027
ದಿನಾಂಕ: 10.05.2016.

## ತಿದ್ದುಪಡಿ ಅಧಿಸೂಚನೆ

ವಿಷಯ:– ದಿನಾಂಕ : 01.07.2016 ರಿಂದ 30.09.2016 ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.

ಉಲ್ಲೇಖ:– ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ:ಸಚುಪ್ರಾ/ಚುನಾವಣೆ/ ಜುಲೈ –ಸೆಪ್ಟಂಬರ್/ 01/2016, ದಿನಾಂಕ: 28.04.2016.

*****

ಪ್ರಾಧಿಕಾರದ ಉಲ್ಲೇಖಿತ ಅಧಿಸೂಚನೆಯಲ್ಲಿ ದಿನಾಂಕ : 01.07.2016 ರಿಂದ 30.09.2016 ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಸಂಬಂಧ ದಿನಾಂಕ: 01.07.2016 ರಿಂದ 30.09.2016 ರವರೆಗೆ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಲು ಚುನಾವಣಾ ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ.

ಸದರಿ ಅಧಿಸೂಚನೆಯಲ್ಲಿರುವ ಅನುಬಂಧ–1ರಲ್ಲಿ ದಿನಾಂಕ: 01.07.2016 ರಿಂದ 30.09.2016 ರವರೆಗೆ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಲು ನಿಗದಿ ಪಡಿಸಿದ ಚುನಾವಣಾ ದಿನಾಂಕಗಳಲ್ಲಿ ದಿನಾಂಕ 01.10.2016 ರಿಂದ 31.10.2016 ರವರೆಗೆ ಎಂಬುದಾಗಿ ತಪ್ಪಾಗಿ ಸೇರ್ಪಡೆಯಾಗಿದ್ದು, ಈ ಕೆಳಕಂಡ ಕ್ರ.ಸಂ.4 ರ ಚುನಾವಣಾ ದಿನಾಂಕಗಳನ್ನು (ದಿನಾಂಕ 01.10.2016 ರಿಂದ 31.10.2016 ರವರೆಗೆ) ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

"

| | | |
|---|---|---|
| ಕ್ರ..ಸಂ.4 | ದಿನಾಂಕ 01.10.2016 ರಿಂದ 31.10.2016 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು | ಶನಿವಾರ 17.09.2016 / ಭಾನುವಾರ 18.09.2016 |
| | ದಿನಾಂಕ 17.09.2016 ಮತ್ತು 18.09.2016 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 25.09.2016 ಸೋಮವಾರ 26.09.2016 |

"

ಉಲ್ಲೇಖಿತ ಅಧಿಸೂಚನೆಯಲ್ಲಿನ ಅನುಬಂಧ–1ರಂತೆ ಕ್ರಮ ಸಂಖ್ಯೆ:1 ರಿಂದ 3ರಲ್ಲಿ ತಿಳಿಸಿರುವ ದಿನಾಂಕಗಳಲ್ಲಿ ಜುಲೈ, ಆಗಸ್ಟ್ ಮತ್ತು ಸೆಪ್ಟಂಬರ್–2016ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಈ ತಿದ್ದುಪಡಿ ಅಧಿಸೂಚನೆ ಹೊರಡಿಸಿದೆ

(ಎನ್.ಸಿ. ಮುನಿಯಪ್ಪ)
**ಆಯುಕ್ತರು**
**ಸಹಕಾರ ಚುನಾವಣಾ ಪ್ರಾಧಿಕಾರ**

**ಇವರಿಗೆ:–**

1. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ), (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು

2. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,
3. ಸಹಕಾರ ಸಂಘಗಳ ಜಂಟಿ ನಿಬಂಧಕರು(ಪಟ್ಟಣ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
4. ಸಹಕಾರ ಸಂಘಗಳ ಜಂಟಿ ನಿಬಂಧಕರು(ಕಾನೂನು ಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
5. ಸಹಕಾರ ಸಂಘಗಳ ಅಪರ ನಿಬಂಧಕರು, ಕಾಡಾ, ಬೆಳಗಾವಿ
6. ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ, ಕಲಬುರಗಿ
7. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು,

**ಪ್ರತಿಗಳು:-**

1. ಮಾನ್ಯ ಸರ್ಕಾರದ ಅಪರ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ
6. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು,